## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ವಿದ್ಯಾರ್ಥಿ ಪ್ಯಾರಾಮೆಡಿಕಲ್ ಕಾಲೇಜ್, ಕೊಡಗು ಈ ಸಂಸ್ಥೆಯಲ್ಲಿ ಚಾಲ್ತಿಯಲ್ಲಿರುವ ಪ್ಯಾರಾಮೆಡಿಕಲ್ ಕೋರ್ಸ್‌ನ ಪ್ರವೇಶ ಮಿತಿಯನ್ನು ಹೆಚ್ಚಿಸಲು ಅನುಮತಿ ನೀಡುವ ಬಗ್ಗೆ.

**ಓದಲಾಗಿದೆ:** ಸದಸ್ಯ ಕಾರ್ಯದರ್ಶಿ, ಪ್ಯಾರಾ ಮೆಡಿಕಲ್ ಬೋರ್ಡ್,ಬೆಂಗಳೂರು ಇವರ ಪತ್ರ ಸಂಖ್ಯೆ:ಪಿಎಂಬಿ/104/2018-19, ದಿ:12.07.2019 & ಪಿಎಂಬಿ/124/2019-20

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ ಸದಸ್ಯ ಕಾರ್ಯದರ್ಶಿ, ಪ್ಯಾರಾ ಮೆಡಿಕಲ್ ಬೋರ್ಡ್,ಬೆಂಗಳೂರು ಇವರು ವಿದ್ಯಾರ್ಥಿ ಪ್ಯಾರಾಮೆಡಿಕಲ್ ಕಾಲೇಜ್, ಕೊಡಗು ಈ ಸಂಸ್ಥೆಯಲ್ಲಿ 2019-20ನೇ ಸಾಲಿನಿಂದ ಈಗಾಗಲೇ ಚಾಲ್ತಿಯಲ್ಲಿರುವ ಡಿಪ್ಲೋಮ ಇನ್ ಮೆಡಿಕಲ್ ಲ್ಯಾಬೊರೇಟರಿ ಟೆಕ್ನಾಲಜಿ ಕೋರ್ಸ್‌ನ ಪ್ರವೇಶಮಿತಿಯನ್ನು 20(ಇಪ್ಪತ್ತು) ರಿಂದ 40(ನಲವತ್ತು) ಸೀಟುಗಳಿಗೆ ಹೆಚ್ಚಿಸಲು ಸುಸಜ್ಜಿತ ಕಟ್ಟಡ, ಗ್ರಂಥಾಲಯ, ವಾಹನ ಸೌಲಭ್ಯ, ಬೋಧನಾ ಸಿಬ್ಬಂದಿ ಹಾಗೂ ಇನ್ನಿತರೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಬಗ್ಗೆ ತಪಾಸಣಾ ತಂಡದಿಂದ ತಪಾಸಣಾ ನಡೆಸಿ, ತಪಾಸಣಾ ತಂಡದ ಶಿಫಾರಸ್ಸಿನನ್ವಯ ಮೇಲ್ಕಂಡ ಕೋರ್ಸ್‌ನ ಪ್ರವೇಶ ಮಿತಿಯನ್ನು 2019-20ನೇ ಸಾಲಿನಿಂದ ಹೆಚ್ಚಿಸಲು ಮಂಜೂರಾತಿ ನೀಡುವಂತೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ ವಿದ್ಯಾರ್ಥಿ ಪ್ಯಾರಾಮೆಡಿಕಲ್ ಕಾಲೇಜ್, ಆಕ್ಸಿಸ್ ಬ್ಯಾಂಕ್ ಹಿಂಭಾಗ, ಬಿ.ಎಂ.ರಸ್ತೆ, ಕುಶಾಲನಗರ, ಕೊಡಗು-571 234 ಈ ಸಂಸ್ಥೆಯಲ್ಲಿ 2019-20ನೇ ಸಾಲಿನಿಂದ ಈಗಾಗಲೇ ಚಾಲ್ತಿಯಲ್ಲಿರುವ ಡಿಪ್ಲೋಮ ಇನ್ ಮೆಡಿಕಲ್ ಲ್ಯಾಬೊರೇಟರಿ ಟೆಕ್ನಾಲಜಿ ಕೋರ್ಸ್‌ನ ಪ್ರವೇಶಮಿತಿಯನ್ನು 20(ಇಪ್ಪತ್ತು) ರಿಂದ 40(ನಲವತ್ತು) ಸೀಟುಗಳಿಗೆ ಹೆಚ್ಚಿಸಲು ಮಂಜೂರಾತಿ ನೀಡಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ ಎಂಇಡಿ 198 ಎಂಪಿಎಸ್ 2019, ಬೆಂಗಳೂರು, ದಿನಾಂಕ:25.09.2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ವಿದ್ಯಾರ್ಥಿ ಪ್ಯಾರಾಮೆಡಿಕಲ್ ಕಾಲೇಜ್, ಆಕ್ಸಿಸ್ ಬ್ಯಾಂಕ್ ಹಿಂಭಾಗ, ಬಿ.ಎಂ.ರಸ್ತೆ, ಕುಶಾಲನಗರ, ಕೊಡಗು-571 234 ಈ ಸಂಸ್ಥೆಯಲ್ಲಿ 2019-20ನೇ ಸಾಲಿನಿಂದ ಈಗಾಗಲೇ ಚಾಲ್ತಿಯಲ್ಲಿರುವ ಡಿಪ್ಲೋಮ ಇನ್ ಮೆಡಿಕಲ್ ಲ್ಯಾಬೊರೇಟರಿ ಟೆಕ್ನಾಲಜಿ ಕೋರ್ಸ್‌ನ ಪ್ರವೇಶಮಿತಿಯನ್ನು 20(ಇಪ್ಪತ್ತು) ರಿಂದ 40(ನಲವತ್ತು) ಸೀಟುಗಳಿಗೆ ಹೆಚ್ಚಿಸಲು ಈ ಮುಂದಿನ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಮಂಜೂರಾತಿ ನೀಡಿ ಆದೇಶಿಸಿದೆ.

**ಷರತ್ತು ಮತ್ತು ನಿಬಂಧನೆಗಳು**

(1) ಯಾವುದೇ ಪ್ಯಾರಾ ಮೆಡಿಕಲ್ ಕೋರ್ಸುಗಳನ್ನು ಪ್ರಾರಂಭ ಮಾಡುವ ಮೊದಲು ಸಂಸ್ಥೆಯು ಸಂಯೋಜನಾ ಶುಲ್ಕದ ರೂಪದಲ್ಲಿ ಪ್ರತಿ ಕೋರ್ಸಿಗೆ ರೂ.30,000/- (ಮೂವತ್ತು ಸಾವಿರ ರೂಪಾಯಿಗಳು ಮಾತ್ರ) ಗಳು ಹಾಗೂ ಪ್ರತಿ ವರ್ಷ ಸಂಯೋಜನಾ ನವೀಕರಣ ಶುಲ್ಕವಾಗಿ ರೂ.10,000/- (ಹತ್ತು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಅಥವಾ ಈ ಬಗ್ಗೆ ಸರ್ಕಾರವು ಕಾಲಕಾಲಕ್ಕೆ ಪರಿಷ್ಕರಿಸಿ ನಿಗದಿಪಡಿಸುವ ದರಗಳಂತೆ ಶುಲ್ಕವನ್ನು ಪ್ಯಾರಾ ಮೆಡಿಕಲ್ ಬೋರ್ಡಿಗೆ ಸಂದಾಯ ಮಾಡತಕ್ಕದ್ದು.

(2) ಈ ಸಂಸ್ಥೆಯವರು ಸದರಿ ಕೋರ್ಸುಗಳನ್ನು ಪ್ರಾರಂಭಿಸುವ ಮೊದಲು ಪ್ಯಾರಾ ಮೆಡಿಕಲ್ ಬೋರ್ಡ್ ನಿಗದಿಪಡಿಸುವ ಬ್ಯಾಂಕ್ ಗ್ಯಾರಂಟಿಯನ್ನು ಒದಗಿಸತಕ್ಕದ್ದು.

(3) ಸದರಿ ಕೋರ್ಸುಗಳಿಗೆ ವಿದ್ಯಾರ್ಥಿಗಳ ಪ್ರವೇಶವನ್ನು ವರ್ಷಕ್ಕೆ ಒಂದು ಬಾರಿ ಪ್ಯಾರಾ ಮೆಡಿಕಲ್ ಬೋರ್ಡ್‌ನ ಕ್ಯಾಲೆಂಡರ್ ಆಫ್ ಇವೆಂಟ್ಸ್‌ನ ಪ್ರಕಾರ ಪ್ರವೇಶಪಡೆದ ವಿದ್ಯಾರ್ಥಿಗಳ ಪಟ್ಟಿಯನ್ನು ಮೂಲ ಅಂಕಪಟ್ಟಿಗಳನ್ನು ಮತ್ತು ದೃಢೀಕರಣಗಳನ್ನು ಈ ಸಂಸ್ಥೆಯವರು ಪ್ಯಾರಾ ಮೆಡಿಕಲ್ ಬೋರ್ಡಿಗೆ ಸಲ್ಲಿಸತಕ್ಕದ್ದು.

25/9/2019